

# ಬಿಪಾಸಾ ಮೇಕಪ್!

ಗೆಳೆಯ ಜಾನ್ ಅಬ್ರಹಾಂನಿಂದ ದೂರವಾಗಿರುವ ಬಿಪಾಸಾ ಬಸು ಇತ್ತೀಚೆಗೆ ಯಾಕೋ ಹೆಚ್ಚು ಸುದ್ದಿಯಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ಮೊನ್ನೆ ಮುಂಬೈಯ ಖಾರ್‌ನಲ್ಲಿ ಬಿಪಾಸಾ ಕಾಫಿ ಶಾಪ್ ಒಂದರಲ್ಲಿ ಕುಳಿತು ಮೂವರು ಗೆಳೆಯರ ಜತೆ ಹರಟೆ ಹೊಡೆಯುತ್ತಿದ್ದಳಂತೆ. ಆಕೆ ಒಂದು ಗಂಟೆಗೂ ಹೆಚ್ಚು ಕಾಲ ಕುಳಿತಿದ್ದರೂ ಯಾರೂ ಆಕೆಯನ್ನು ಗಮನಿಸಲೇ ಇಲ್ಲವಂತೆ. ಕಾರಣ– ಆಕೆ ಮೇಕಪ್ ಇಲ್ಲದೆ ಬಂದಿದ್ದು! ಯಾವ ಅಲಂಕಾರಗಳೂ ಇಲ್ಲದೆ ಕಾಫಿ ಶಾಪ್‌ನಲ್ಲಿ ಕುಳಿತಿದ್ದ ಆಕೆ ಬಿಪಾಸಾ ಹೌದೋ ಅಲ್ಲವೋ.. ಎಂದು ನೋಡಿದವರೂ ಕೆಲವರು ಅನುಮಾನ ಪಟ್ಟರಂತೆ!

# ಸರಸ-ವಿರಸ



ಬಾಲಿವುಡ್ ಹೀರೊ– ಹೀರೋಯಿನ್‌ಗಳ ನಡುವಣ ಕೋಪ– ತಾಪ– ವಿರಸಗಳೂ ತಮಾಷೆಯಾಗಿರುತ್ತವೆ. ಇತ್ತೀಚೆಗೆ ಮೆಹಬೂಬ್ ಸ್ಟುಡಿಯೋದಲ್ಲಿ ನಡೆದದ್ದನ್ನೇ ಗಮನಿಸಿ.

ಪ್ರಕರಣ 1: ಸೈಫ್ ಅಲಿ ಖಾನ್ ಮತ್ತು ಶಾಹಿದ್ ಕಪೂರ್ ಇಬ್ಬರೂ ಏಕಕಾಲಕ್ಕೆ ಮೆಹಬೂಬ್ ಸ್ಟುಡಿಯೋದಲ್ಲಿ ಶೂಟಿಂಗಿಗೆ ಹಾಜರಾಗಿದ್ದರು. ಒಬ್ಬ ಕರೀನಾ ಕಪೂರ್‌ನ ಹಾಲಿ ಸಂಗಾತಿ; ಇನ್ನೊಬ್ಬ ಕರೀನಾಳ ಮಾಜಿ ಲವರ್. ಸೈಫ್ ಜಾಹೀರಾತಿನ ಶೂಟಿಂಗಿಗೆ ಬಂದಿದ್ದರೆ, ಶಾಹಿದ್ ಅಪ್ಪನ ಜತೆ ಹೊಸ ಸಿನಿಮಾದ ಫೋಟೋ ಶೂಟ್ ನಡೆಸಿದ್ದರು. ಇಬ್ಬರ ಓಬಿ ವ್ಯಾನ್‌ಗಳೂ 100 ಅಡಿ ಅಂತರದಲ್ಲಿ ಅಕ್ಕಪಕ್ಕದಲ್ಲೇ ನಿಂತಿದ್ದವು. ಆದರೆ ಇಬ್ಬರೂ ಒಬ್ಬರನ್ನೊಬ್ಬರು ಅಪ್ಪಿ ತಪ್ಪಿಯೂ ನೋಡಲಿಲ್ಲ! ವಿಶ್ ಕೂಡಾ ಮಾಡಲಿಲ್ಲ! ಇಬ್ಬರೂ ಸ್ಟುಡಿಯೊ ಫ್ಲೋರ್ ಮತ್ತು ವ್ಯಾನ್‌ನ ಮಧ್ಯೆ ನಾಲ್ಕೈದು ಸಲ ಓಡಾಡಿದರಂತೆ. ಆದರೆ ಅವರ ಸಿಬ್ಬಂದಿ ಇಬ್ಬರೂ ಮುಖಾಮುಖಿಯಾಗದಂತೆ ಸಾಕಷ್ಟು ಎಚ್ಚರ ವಹಿಸಿದರಂತೆ!

ಪ್ರಕರಣ 2: ಅದೇ ಸ್ಟುಡಿಯೋದಲ್ಲಿ ಪ್ರಿಯಾಂಕಾ ಚೋಪ್ರಾಳ ಕಮರ್ಷಿಯಲ್ ಒಂದರ ಶೂಟಿಂಗ್ ನಡೆದಿತ್ತು. ಪಕ್ಕದ ಫ್ಲೋರ್‌ನಲ್ಲಿದ್ದ ಶಾರೂಕ್ ಖಾನ್ ಅಲ್ಲಿಗೆ ಬಂದು ನಿರ್ಮಾಪಕ ತರುಣ್ ಮನ್‌ಸುಖಾನಿ ಜತೆಗೆ ಹರಟೆ ಹೊಡೆದನಂತೆ. ಶೂಟಿಂಗ್‌ನಲ್ಲಿದ್ದ ಪ್ರಿಯಾಂಕಾಗೆ ಹಲೋ ಹೇಳಿದ್ದಲ್ಲದೆ, ವಿಶ್ ಕೂಡಾ ಮಾಡಿದನಂತೆ! ಪ್ರಿಯಾಂಕಾ ಫುಲ್ ಖುಷ್ ಆಗಿದ್ದಳಂತೆ!



# ಚಿರಂಜೀವಿ ರೆಡಿ!

ಕಳೆದ ಒಂದೆರಡು ವರ್ಷಗಳಿಂದ ರಾಜಕೀಯದಲ್ಲಿ ಬ್ಯುಸಿಯಾಗಿದ್ದ ತೆಲುಗಿನ ಮೆಗಾಸ್ಟಾರ್ ಚಿರಂಜೀವಿ ಈಗ ಮತ್ತೆ ಸಿನಿಮಾದಲ್ಲಿ ನಟಿಸುವುದು ಖಚಿತವಾಗಿದೆ. ಮಗ ರಾಮ್‌ಚರಣ್ ತೇಜಾ ನಿರ್ಮಾಣದ ಈ ಹೊಸ ಚಿತ್ರ ಚಿರಂಜೀವಿಯ 150ನೇ ಚಿತ್ರವಾಗಲಿದೆ. ಸೋದರ ನಾಗಬಾಬು ಒತ್ತಾಯವೇ ಇದಕ್ಕೆ ಕಾರಣವಂತೆ. ಎಲ್ಲ ಅಂದುಕೊಂಡ ಹಾಗೆ ನಡೆದರೆ, ಚಿತ್ರಕ್ಕೆ 'ಆದಿನಾಯಕುಡು' ಎಂಬ ಟೈಟಲ್ ಪಕ್ಕಾ ಆಗಲಿದೆ. ಹಾಗೆಯೇ ಪೂರಿ ಜಗನ್ನಾಥ್ ಈ ಚಿತ್ರವನ್ನು ನಿರ್ದೇಶಿಸುವ ಸಾಧ್ಯತೆ ಇದೆ.

■ ಬಿಂದು